## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಂ.ಅಶೋಕರಾಜು, ಆಯ್ಕೆ ಶ್ರೇಣಿ ಉಪನ್ಯಾಸಕರು (ನಿವೃತ್ತ) ಸರ್ಕಾರಿ ಮುದ್ರಣ ಸಂಸ್ಥೆ, ಬೆಂಗಳೂರು ಇವರ ವಿರುದ್ಧದ ಇಲಾಖಾ ವಿಚಾರಣೆ – **ಅಂತಿಮ ಆದೇಶ.**

**ಓದಲಾಗಿದೆ:-**

1) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 17 ಡಿಇಕ್ಯೂ (1) 2004:4473 ದಿ: 23/28.3.2005 ಮತ್ತು 14/16.2.2006 (ಪುಟ 3 ಮತ್ತು 52)
2) ನೋಟೀಸ್ ಸಂಖ್ಯೆ: ಇಡಿ 73 ಡಿಟಿಇ 2005 ದಿ: 12.6.2006 (ಪುಟ 61)
3) ಶ್ರೀ ಎಂ.ಅಶೋಕರಾಜು ಇವರ ಲಿಖಿತ ಉತ್ತರ ದಿನಾಂಕ 3.7.2006
4) ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಡಿಟಿಇ 2005 ದಿ 5.4.2007
5) ಸರ್ಕಾರದ ಆದೇಶ ಸಂಖ್ಯೆ: ಇಡಿ 71 ಡಿಟಿಇ 2010 ದಿ: 27.12.2010
6) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ 18.8.2011
7) 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಡಿ 71 ಡಿಟಿಇ 2010 ದಿನಾಂಕ 28.8.2012

DEQ(1)/Reg

**ಪ್ರಸ್ತಾವನೆ:-**

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಶ್ರೀ ಎಂ.ಅಶೋಕರಾಜು, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ಬೆಂಗಳೂರು ಇವರು ಪ್ರತಿ ದಿನ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ ಸಂಸ್ಥೆಯ ಆವರಣದಲ್ಲೇ ಇದ್ದು, ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳನ್ನು ಬೋಧಿಸುತ್ತಿಲ್ಲವೆಂದು ಸದರಿ ಸಂಸ್ಥೆಯ ಪ್ರಾಂಶುಪಾಲರು ವರದಿ ಮಾಡಿರುತ್ತಾರೆಂದು ತಿಳಿಸಿ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ದೋಷಾರೋಪಣಾ ಪಟ್ಟಿಯನ್ನು ಸರ್ಕಾರವು ಪರಿಶೀಲಿಸಿ ಕರ್ನಾಟಕ ಸರ್ಕಾರಿ ಸೇವಾ (ಸಿಸಿಎ) ನಿಯಮಗಳು 1957ರ ನಿಯಮ 12ರ ಉಪಬಂಧಗಳಿಗನುಸಾರವಾಗಿ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ದುರ್ನಡತೆಯ ದೋಷಾರೋಪಣಾ ಮತ್ತು ದೋಷಾರೋಪಣೆಯ ವಿವರಗಳನ್ನು ಹಾಗೂ ಅದಕ್ಕೆ ಸಮರ್ಥಿಸುವ ದಸ್ತಾವೇಜುಗಳ ಮತ್ತು ಸಾಕ್ಷಿಗಳ ಪಟ್ಟಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಿ ಅವರ ಲಿಖಿತ ಹೇಳಿಕೆಗಳನ್ನು ನೀಡಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಶ್ರೀ ಎಂ.ಅಶೋಕರಾಜು ಇವರು ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿ, ದೋಷಾರೋಪಣೆಗೆ ಸಂಬಂಧಿಸಿದಂತೆ ಕೆಲವೊಂದು ದಾಖಲೆಗಳನ್ನು ಒದಗಿಸುವಂತೆ ಕೋರಿದ್ದು, ದಾಖಲೆಗಳನ್ನು ಒದಗಿಸಿದ ನಂತರ ಲಿಖಿತ ಉತ್ತರ ನೀಡಲಾಗುವುದೆಂದು ತಿಳಿಸಿರುತ್ತಾರೆ. ಸದರಿ ದಾಖಲೆಗಳನ್ನು ನಿದೇಶಕರ ಕಛೇರಿಯಿಂದ ಪಡೆಯುವಂತೆ ಆಪಾದಿತ ಅಧಿಕಾರಿಗೆ ದಿ: 26.9.2006ರ ಪತ್ರದಲ್ಲಿ ತಿಳಿಸಿ ಉತ್ತರವನ್ನು ಮತ್ತೆ 15 ದಿನಗಳ ಒಳಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕೋರಲಾಗಿರುತ್ತದೆ.

-2-

PS-655 24/7/15

23/7/15 12.00 PM

ತದನಂತರ ಶ್ರೀ ಎಂ.ಅಶೋಕರಾಜು ಇವರಿಂದ ಯಾವುದೇ ಲಿಖಿತ ಉತ್ತರ ಸ್ವೀಕೃತವಾಗದೇ ಇರುವುದರಿಂದ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ 11ರ ಉಪಬಂಧಗಳಿಗನುಸಾರವಾಗಿ (2) ಮತ್ತು (5)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಆರ್.ಎಲ್ ಅಗ್ನಿಹೋತ್ರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ, ಇಲಾಖಾ ವಿಚಾರಣೆಯನ್ನು 2 ತಿಂಗಳ ಒಳಗಾಗಿ ಪೂರ್ಣಗೊಳಿಸಿ ವರದಿ ನೀಡುವಂತೆ ಮೇಲೆ(4)ರಲ್ಲಿ ಓದಲಾದ ಆದೇಶದಲ್ಲಿ ಆದೇಶಿಸಲಾಗಿತ್ತು. ಈ ಮಧ್ಯೆ ಆರೋಪಿತ ಅಧಿಕಾರಿಯು ದಿನಾಂಕ 31.8.2008ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಆದರೆ ವಿಚಾರಣಾಧಿಕಾರಿಗಳು ತಮ್ಮ ಅನಾರೋಗ್ಯದ ನಿಮಿತ್ತ ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ದಿ: 18.10.2010ರ ಪತ್ರದಲ್ಲಿ ತಿಳಿಸಿದ್ದರ ಮೇರೆಗೆ ಮೇಲೆ (5)ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಎಸ್.ಎಲ್.ಅಗ್ನಿಹೋತ್ರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ಬದಲಿಗೆ ಶ್ರೀ ಎಂ.ಜಿ.ಹಿರೇಮಠ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

ವಿಚಾರಣಾಧಿಕಾರಿಗಳು ವಿವರವಾದ ಇಲಾಖಾ ವಿಚಾರಣೆ ನಡೆಸಿ ಮೇಲೆ (6)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಆಪಾದಿತರು ದಿ: 30.6.2004, 25.8.2004 ಹಾಗೂ 13.9.2004ರಂದು ಕಛೇರಿಯ ಹಾಜರಾತಿಯಲ್ಲಿ ಸಹಿ ಮಾಡಿ ಸಂಸ್ಥೆಯ ಆವರಣದಲ್ಲಿಯೇ ಇದ್ದು ತರಗತಿಗಳನ್ನು ತೆಗೆದುಕೊಂಡಿರುವುದಿಲ್ಲ ಎಂಬ ಆರೋಪವು ರುಜುವಾತಾಗಿರುತ್ತದೆಯೆಂದು ವರದಿ ಮಾಡಿರುತ್ತಾರೆ.

ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯನ್ನು ಆರೋಪಿತ ಅಧಿಕಾರಿಗೆ ಮೇಲೆ (7 )ರಲ್ಲಿ ಓದಲಾದ 2ನೇ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಿ ಈ ಬಗ್ಗೆ ತಮ್ಮ ಲಿಖಿತ ಉತ್ತರವನ್ನು ನೀಡುವಂತೆ ತಿಳಿಸಲಾಗಿತ್ತು. ಆದರೆ ಆರೋಪಿತ ಅಧಿಕಾರಿಯಿಂದ ಯಾವುದೇ ಲಿಖಿತ ಉತ್ತರ ಸ್ವೀಕೃತವಾಗಿರುವುದಿಲ್ಲ.

ವಿಚಾರಣಾಧಿಕಾರಿಗಳ ವಿಚಾರಣಾ ವರದಿ, ಹಾಗೂ ದಾಖಲೆಗಳು ಇತ್ಯಾದಿಗಳೆಲ್ಲವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಆಪಾದಿತರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ ಹಾಗೂ ಸದರಿಯವರು ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಅವರ ನಿವೃತ್ತಿ ವೇತನದಲ್ಲಿ ಶೇಕಡ 10ರಷ್ಟನ್ನು ಒಂದು ವರ್ಷದ ಅವಧಿಯವರೆಗೆ ಕಡಿತಗೊಳಿಸುವ ದಂಡನೆ ವಿಧಿಸಲು ತೀರ್ಮಾನಿಸಿರುತ್ತದೆ. ಅದರಂತೆ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಇಡಿ 71 ಡಿಟಿಇ 2010, ಬೆಂಗಳೂರು, ದಿನಾಂಕ 23.7.2015</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು, ಶ್ರೀ ಎಂ.ಅಶೋಕರಾಜು ಆಯ್ಕೆ ಶ್ರೇಣಿ ಉಪನ್ಯಾಸಕರು (ನಿವೃತ್ತ) ಇವರ ವಿರುದ್ಧದ ಆರೋಪವು ಇಲಾಖಾ ವಿಚಾರಣೆಯಿಂದ ಸಾಬೀತಾಗಿರುವುದರಿಂದ ಕರ್ನಾಟಕ ಸಿವಿಲ್ ಸೇವಾ ನಿಯಮಗಳ ನಿಯಮ 214(1)(ಎ)ರಂತೆ ಅವರ ನಿವೃತ್ತಿ ವೇತನದಲ್ಲಿ ಶೇಕಡ 10ರಷ್ಟನ್ನು ಒಂದು ವರ್ಷದ ಅವಧಿಯವರೆಗೆ ಕಡಿತಗೊಳಿಸುವ ದಂಡನೆ ವಿಧಿಸಿ ಆದೇಶಿಸಿದೆ.

- 3 -

ಈ ಆದೇಶವನ್ನು ಕರ್ನಾಟಕ ಲೋಕಸೇವಾ ಆಯೋಗವು ಪತ್ರ ಸಂಖ್ಯೆ: ಪಿಎಸ್‌ಸಿ 62 ಸಿಎನ್‌ಎಸ್ 15 ಪಿಎಸ್‌ಸಿ ದಿನಾಂಕ 25.6.2015ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:

1) ಮಹಾಲೇಖಪಾಲರು. (ಎ ಅಂಡ್ ಇ. ಲೆಕ್ಕಪರಿಶೋಧನೆ-1. ಲೆಕ್ಕಪರಿಶೋಧನೆ-2) ಕರ್ನಾಟಕ. ಬೆಂಗಳೂರು
2) ಕಾರ್ಯದರ್ಶಿಗಳು. ಕರ್ನಾಟಕ ಲೋಕಸೇವಾ ಆಯೋಗ. ಬೆಂಗಳೂರು
3) ನಿರ್ದೇಶಕರು. ತಾಂತ್ರಿಕ ಶಿಕ್ಷಣ ಇಲಾಖೆ. ಬೆಂಗಳೂರು
4) ಪ್ರಾಂಶುಪಾಲರು. ಸರ್ಕಾರಿ ಮುದ್ರಣ ಸಂಸ್ಥೆ. ಬೆಂಗಳೂರು .
5) ಸಂಬಂಧಿಸಿದ ಅಧಿಕಾರಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
6) ಶಾ.ರ.ಕ /ಹೆಚ್ಚುವರಿ ಪ್ರತಿ

**ಹಿಂಬರಹ ಸಂಖ್ಯೆ: ಡಿಟಿಇ 17 ಡಿಇಕ್ಯೂ(1) 2004, ದಿನಾಂಕ: 25/07/2015** / 1497

ಸರ್ಕಾರದ ಆದೇಶ ಸಂಖ್ಯೆ: ಇಡಿ/71/ಡಿಟಿಇ/2010, ದಿ: 23/7/2015ನ್ನು ಪ್ರಿನ್ಸಿಪಾಲರು, ಸರ್ಕಾರಿ ಮುದ್ರಣ ಸಂಸ್ಥೆ, ಬೆಂಗಳೂರು ಇವರ ಮುಖಾಂತರ ಶ್ರೀ.ಎಂ.ಅಶೋಕರಾಜು, ಆಯ್ಕೆ ಶ್ರೇಣಿ ಉಪನ್ಯಾಸಕರು(ನಿವೃತ್ತ) ಇವರಿಗೆ ಕಳುಹಿಸಲಾಗಿದೆ.

ಆಡಳಿತಾಧಿಕಾರಿ

ಇವರಿಗೆ,

ಶ್ರೀ.ಎಂ.ಅಶೋಕ್‌ರಾಜು, ಆಯ್ಕೆ ಶ್ರೇಣಿ ಉಪನ್ಯಾಸಕರು(ನಿವೃತ್ತ),
#42, ಸಂಜೀವಪ್ಪ ಲೇನ್, ಅವೆನ್ಯೂರೋಡ್ ಕ್ರಾಸ್, ಬೆಂಗಳೂರು-560 002.

**ಪ್ರತಿ – ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ**

1. ಮಹಾಲೇಖಪಾಲರು,(ಎ ಅಂಡ್ ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ಮುಖ್ಯಮಂತ್ರಿಗಳ ಪತ್ರಿಕಾ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
5. ಪ್ರಾಂಶುಪಾಲರು, ಸರ್ಕಾರಿ ಮುದ್ರಣ ಸಂಸ್ಥೆ, ಬೆಂಗಳೂರು.
6. ಜಂಟಿನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು
8. ನಿರ್ದೇಶಕರ ಆಪ್ತಶಾಖೆಗೆ ಮಾಹಿತಿಗಾಗಿ.
9. ಇ-ಆಡಳಿತ ವಿಭಾಗ, ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್ ಅಳವಡಿಸುವ ಸೂಕ್ತ ಕ್ರಮಕ್ಕಾಗಿ.
10. ಇಎಸ್ಟ(1)ಎ, ಇಎಸ್ಟ(9), ಇಎಸ್ಟ(7), ನಿರ್ದೇಶನಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.